## ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.1187/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಶಿವಕುಮಾರ್ | ಸಿಡಬ್ಲ್ಯೂ-1 |
| ತಂದೆಯ ಹೆಸರು | - | ಜಂಗ್ಲಿ ಈರಪ್ಪ | ಪಿಡಬ್ಲ್ಯೂ-1 |
| ವಯಸ್ಸು | - | 31 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ | - | ಸೀಗೆಹಟ್ಟಿ ಗ್ರಾಮ | |

ದಿನಾಂಕಃ11.09.2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

### ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ

ನನಗೆ ಚಾಸಾ.2 ರಿಂದ 5 ರವರು ಪರಿಚಯವಿದ್ದಾರೆ. ಮೃತ ಜಂಗ್ಲಿ ಈರಪ್ಪ ನನ್ನ ತಂದೆ ಅವರು ರಸ್ತೆ ಅಪಘಾತದಲ್ಲಿ ಮೃತ ಪಟ್ಟಿದ್ದಾರೆ. ಅಂದಾಜು 2-3 ವರ್ಷಗಳ ಹಿಂದೆ ರಾತ್ರಿ ಸಮಯದಲ್ಲಿ ಹುಳಿಯಾರಿಗೆ ಹೋಗಿದ್ದು ಮರು ದಿನ ಬೆಳಿಗ್ಗೆ ರಸ್ತೆ ಅಪಘಾತವಾಗಿದೆ ಎಂದು ನನಗೆ ತಿಳಿಸಿದರು. ಮಹೇಶ್ ಎಂಬ ವ್ಯಕ್ತಿ ಫೋನ್ ನಲ್ಲಿ ಅಪಘಾತದ ವಿಷಯ ತಿಳಿಸಿದ. ವಿಷಯ ತಿಳಿದ ತಕ್ಷಣ ನಾನು ಸ್ಥಳಕ್ಕೆ ಹೋಗಿದ್ದೆ. ನನ್ನ ತಂದೆ ಅಪಘಾತದಲ್ಲಿ ಅವರ ಎಡಗಾಲಿಗೆ ಏಟಾಗಿ ಕೆಳಗೆ ಬಿದಿದ್ದರು. ನನ್ನ ತಂದೆಗೆ ಬೈಕ್ ನಿಂದ ಅಪಘಾತವಾಗಿದೆ ಎಂದು ಗೊತ್ತಾಗಿದ್ದು ಸದರಿ ಬೈಕ್ ನಂಬರ್ ಗೊತ್ತಿಲ್ಲ ಮತ್ತು ಅಪಘಾತ ಹೇಗಾಯಿತು ಎಂದು ನೋಡಿಲ್ಲ. ಆ ದಿನ ಬೈಕನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ಗೊತ್ತಿಲ್ಲ. ಅದೇ ರೀತಿ ಆ ಬೈಕ್ ಚಾಲಕ ವಾಹನ ಯಾವ ರೀತಿ ಮತ್ತು ಎಷ್ಟು ವೇಗದಲ್ಲಿ ಚಾಲನೆ ಮಾಡುತ್ತಿದ್ದ ಎಂದು ಕೇಳಿ ತಿಳಿದುಕೊಂಡಿಲ್ಲ.

ನನ್ನ ತಂದೆಗೆ ಚಿಕಿತ್ಸೆಗಾಗಿ ಯಲ್ಲಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ ನಂತರ ಹಿರಿಯೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಗೆ ಕರೆದುಕೊಂಡು ಹೋಗಿದ್ದೆ. ಆ ನಂತರ ನಾಟಿ ಚಿಕಿತ್ಸೆಗಾಗಿ ನನ್ನ ತಂದೆಗೆ ಹರಪ್ಪನಹಳ್ಳಿಗೆ ಕರೆದುಕೊಂಡು ಹೋಗಿದ್ದೆ. ಅಪಘಾತದ ಬಗ್ಗೆ ನಾನು

ಪೊಲೀಸರಿಗೆ ಒಂದು ದೂರು ನೀಡಿದ್ದೇನೆ. ಸಾಕ್ಷಿಗೆ ದೂರನು ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದರಿಂದ ದಾಖಲೆಯನ್ನುನಿಪಿ-1 ಎಂದು ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಅಂದಾಜು 2 ವರ್ಷಗಳ ಹಿಂದೆ ಸದರಿ ದೂರು ಕೊಟ್ಟಿದ್ದೇನೆ. ದೂರನ್ನು ನಾನು ಹೇಳಿದಂತೆ ನಾಗರಾರಜ್ ಬರೆದಿದ್ದಾನೆ.

ಸಾಕ್ಷಿಗೆ ಹೆಚ್ಚುವರಿ ದೂರು ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದರಿಂದ ದಾಖಲೆಯನ್ನು ನಿಪಿ-2 ಎಂದು ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಅಪಘಾತವಾದ 15 ದಿನ ನಂತರ ನನ್ನ ತಂದೆ ಮೃತ ಪಟ್ಟಿದ್ದು ಆ ಬಗ್ಗೆ ನಿಪಿ-2 ದಾಖಲಿಸಿದ್ದೇನೆ.

ಸಾಕ್ಷಿಗೆ ಸ್ಥಳ ಮಹಜರ್ ಮತ್ತು ನಕಾಶೆ ತೋರಿಸಲಾಗಿ ಸಾಕ್ಷಿಯು ಅವುಗಳಲ್ಲಿರುವ ಸಹಿ ನೋಡಿ ಗುರುತಿಸಿದ್ದರಿಂದ ದಾಖಲೆಗಳನ್ನು ನಿಪಿ-3 ಮತ್ತು 4 ಎಂದು ಸಹಿಗಳನ್ನು ನಿಪಿ-3(ಎ) ಮತ್ತು 4(ಎ) ಎಂದು ಗುರುತಿಸಲಾಯಿತು. ಈ ಎರಡು ದಾಖಲೆಗಳಿಗೆ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಾಗಿ ಸಹಿ ಮಾಡಿದ್ದೇನೆ. ಪೊಲೀಸ್ ಠಾಣೆಯಲ್ಲಿ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ನನ್ನ ಜೊತೆ ಸದರಿ ದಾಖಲೆಗೆ ರಂಗಪ್ಪ ಮತ್ತು ಶಾಂತಕುಮಾರ್ ಸಹಿ ಮಾಡಿದ್ದಾರೆ.

ಸಾಕ್ಷಿಗೆ ಪೋಟೋ ತೋರಿಸಲಾಗಿ ಅದರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದಾರೆ. ಸದರಿ ಪೋಟೋವನ್ನು ನಿಪಿ-5 ಎಂದು ಗುರುತಿಸಲಾಯಿತು. ಸದರಿ ಪೋಟೋವನ್ನು ಪೊಲೀಸರು ಅಪಘಾತದ ಸ್ಥಳದಲ್ಲಿ ತೆಗೆಸಿದ್ದಾರೆ.

ಸಾಕ್ಷಿಗೆ ಇನ್ನು 4 ಪೋಟೋಗಳನ್ನು ತೋರಿಸಿದಾಗ ಅವುಗಳನ್ನು ನೋಡಿ ಅದರಲ್ಲಿರುವ ವಾಹನದಿಂದಲೇ ಅಪಘಾತವಾಗಿರಬಹುದು ಎಂದು ಸಾಕ್ಷಿ ಗುರುತಿಸಿದ್ದರಿಂದ 4 ಪೋಟೋಗಳನ್ನು ಕ್ರಮಾಗಿ ನಿಪಿ-6 ರಿಂದ 9 ಎಂದು ಗುರುತಿಸಲಾಯಿತು. ಅಪಘಾತದ ಪ್ರಕರಣಕ್ಕೆ ಸಂಬಂಧಿಸಿದಂತೆ

ಪೊಲೀಸರು ನನ್ನನ್ನು ಪುನಃ ವಿಚಾರಿಸಿಲ್ಲ ಮತ್ತು ಯಾವುದೇ ಮರು ಹೇಳಿಕೆ ಮಾಡಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

ದಿಃ02.10.2020 ರಂದು ರಾತ್ರಿ 8.15 ಕ್ಕೆ ಮಹೇಶ್ ನನಗೆ ಫೋನ್ ಮಾಡಿ ನನ್ನ ತಂದೆಗೆ ಅಪಘಾತವಾಗಿದೆ ಎಂಬ ವಿಷಯ ತಿಳಿಸಿದ್ದ ಎಂದರೆ ನಿಜ. ಆ ದಿನ ನನ್ನ ತಂದೆ ಅನಾರೋಗ್ಯದ ಕಾರಣ ಚಿಕಿತ್ಸೆಗಾಗಿ ಯಲ್ಲಕೆರೆ ಆಸ್ಪತ್ರೆಗೆ ಹೋಗಿದ್ದರು ಎಂದರೆ ನಿಜ. ಆ ದಿನ ನನ್ನ ತಂದೆ ಮಹೇಶ್ ಗೆ ಫೋನ್ ಮಾಡಿ ಯಲ್ಲಕೆರೆಗೆ ಕರೆಸಿಕೊಂಡು ನೀನು ಇಲ್ಲಿಯೇ ನಿಂತಿರು ನಾನು ಬೇಕರಿಗೆ ಹೋಗಿ ಹಾಲು ತರುತ್ತೇನೆ ಎಂದು ಹೇಳಿ ಯಲ್ಲಕೆರೆ ಬಸ್ ನಿಲ್ದಾಣದ ಹತ್ತಿರ ರಾತ್ರಿ 8.15 ಕ್ಕೆ ರಸ್ತೆ ಬದಿಯಲ್ಲಿ ಹೋಗುತ್ತಿರುವಾಗ ಕೆ ಕೆ ಹಟ್ಟಿ ಕಡೆಯಿಂದ ಮೋಟರ್ ಸೈಕಲ್ ನಂ.ಎಪಿ.39.ಬಿಜಡ್. 4836 ಇದರ ಚಾಲಕನು ಅತಿವೇಗ ಮತ್ತು ನಿರ್ಲಕ್ಷತನದಿಂದ ಬಂದು ನನ್ನ ತಂದೆಗೆ ಡಿಕ್ಕಿ ಪಡಿಸಿದ ಕಾರಣ ಅವರ ಮೈಕೈಗೆ ಗಾಯಗಳು ಆಗಿದ್ದವು ಎಂದರೆ ಸಾಕ್ಷಿ ಮಹೇಶ್ ನಿಂದ ವಿಷಯ ಗೊತ್ತಾಯಿತು ಎಂದು ಹೇಳುತ್ತಾರೆ. ಈ ವಿಚಾರವಾಗಿ ನಾನು 03.10.2020 ರಂದು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದೆ ಎಂದರೆ ನಿಜ. ದೂರಿನಲ್ಲಿ ಮೇಲೆ ಹೇಳಿದ ಬೈಕ್ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ಹೇಳಿದ್ದೇನೆ ಎಂದರೆ ನಿಜ. ನಂತರ ದಿಃ25.10.2020 ರಂದು ನನ್ನ ತಂದೆ ಚಿಕಿತ್ಸೆ ಫಲಕಾರಿಯಾಗದೇ ಮೃತ ಪಟ್ಟಿದ್ದರಿಂದ ಆ ಬಗ್ಗೆ ನಿಪಿ-2 ರಂತೆ ಹೆಚ್ಚುವರಿ ದೂರು ಕೊಟ್ಟಿದ್ದೇನೆ ಎಂದರೆ ನಿಜ.

ದಿಃ03.10.2020 ರಂದು ಸಂಜೆ 5.30 ರಿಂದ 6.15 ರ ವರೆಗೆ ಪೊಲೀಸರು ಅಪಘಾತದ ಸ್ಥಳವಾದ ಯಲ್ಲಕೆರೆ ಬಸ್ ನಿಲ್ದಾಣದ ಹತ್ತಿರ ನನ್ನ ಹಾಗೂ ಶಾಂತಕುಮಾರ್ ಮತ್ತು ರಂಗಪ್ಪರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಬೈಕ್ ನಂಎಪಿ.39 ಬಿಜಡ್ 4326 ನ್ನು

ಅಮಾನತ್ತು ಪಡಿಸಿಕೊಂಡು ನಿಪಿ–4 ರಂತೆ ಸ್ಥಳ ನಕಾಶೆ ತಯಾರಿಸಿ ಸಹಿ ಪಡೆದಿರುತ್ತಾರೆ ಎಂದರೆ ನಿಜ. ದಿಃ22.10.2020 ರಂದು ಅಪಘಾತ ಪಡಿಸಿದ ವಾಹನ ಚಾಲಕ ಅಂದರೆ ಗೋಪಲಪ್ಪನನ್ನು ಠಾಣೆಗೆ ಕರೆಸಿ ಆತನನ್ನು ತೋರಿಸಿ ಮರು ಹೇಳಿಕೆ ಮಾಡಿಕೊಂಡಿದ್ದಾರೆ ಎಂದರೆ ನಿಜ.

**ಶ್ರೀ ಆರ್ ಟಿ ಎಸ್ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಪಾಟೀ ಸವಾಲನ್ನು ಮುಂದೂಡಲು ಯಾವುದೇ ಸಕಾರಣಗಳು ಇಲ್ಲದಿರುವುದರಿಂದ ಮನವಿಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು